# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1177 (1148) |
| ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 18-03-2025 |

*****

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ನೇಕಾರರ ಸಂಖ್ಯೆ ಎಷ್ಟು; ರಾಜ್ಯದ ನೇಕಾರರಿಗೆ ಕಾರ್ಮಿಕರ ಕಾರ್ಡ್ ವಿತರಿಸುವ ರೀತಿಯಲ್ಲಿ ನೇಕಾರರ ಕಾರ್ಡ್ ವಿತರಿಸುವ ಬಗ್ಗೆ ಸರ್ಕಾರದ ನಿಲುವೇನು; (ಜಿಲ್ಲಾವಾರು/ ತಾಲ್ಲೂಕುವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿರುವ ಕೈಮಗ್ಗ ನೇಕಾರರ ಸಂಖ್ಯೆ 31102 ಹಾಗೂ ವಿದ್ಯುತ್ ಮಗ್ಗ ಮತ್ತು ಮಗ್ಗ ಪೂರ್ವ ನೇಕಾರರ ಸಂಖ್ಯೆ 89495.<br>ರಾಜ್ಯದ ನೇಕಾರರಿಗೆ ಕಾರ್ಮಿಕರ ಕಾರ್ಡ್ ವಿತರಿಸುವ ರೀತಿಯಲ್ಲಿ 2019-20ನೇ ಸಾಲಿನ 4ನೇ ರಾಷ್ಟ್ರೀಯ ಕೈಮಗ್ಗ ಗಣತಿ ಪ್ರಕಾರ ನೇಕಾರರ ಸೇವಾ ಕೇಂದ್ರ, ಭಾರತ ಸರ್ಕಾರ, ಬೆಂಗಳೂರು ಇವರಿಂದ 47883 ಕೈಮಗ್ಗ ನೇಕಾರರಿಗೆ ಪೆಹಚಾನ್ ಕಾರ್ಡ್‌ನ್ನು ವಿತರಿಸಲಾಗಿದೆ ಹಾಗೂ 2022-23 ನೇ ಸಾಲಿಗೆ 1,17,099 ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ನೇಕಾರರಿಗೆ ಸ್ಮಾರ್ಟ್ ಕಾರ್ಡ್ ವಿತರಿಸಲಾಗಿದೆ.<br>ಕೈಮಗ್ಗ / ವಿದ್ಯುತ್ ಮಗ್ಗ ನೇಕಾರರ ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಆ) | ನೇಕಾರರಿಗೆ ಸರ್ಕಾರದಿಂದ ಉಚಿತ ವಿದ್ಯುತ್ ಒದಗಿಸುವ ಬಗ್ಗೆ ಸರ್ಕಾರದ ನಿಲುವೇನು; ನಿವೇಶನ ರಹಿತ ನೇಕಾರರಿಗೆ ನಿವೇಶನ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ವಿವರ ನೀಡುವುದು) | 2023-24ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-265 ರನ್ವಯ "10 ಹೆಚ್.ಪಿ. ವರೆಗಿನ ವಿದ್ಯುತ್ ಸಂಪರ್ಕ ಹೊಂದಿರುವ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ ಮಾಸಿಕ ಗರಿಷ್ಠ 250 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್ ಒದಗಿಸುವ ಮೂಲಕ ನೇಕಾರರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿಸಲು ಕ್ರಮವಹಿಸಲಾಗುವುದು" ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ: CI/37/JAKY/2023 ಬೆಂಗಳೂರು ದಿನಾಂಕ:20.10.2023 & 25.09.2024 ರಲ್ಲಿ ಮಾರ್ಗಸೂಚಿಯನ್ನು ಹೊರಡಿಸಲಾಗಿರುತ್ತದೆ. ವಿವರ ಇಂತಿದೆ.<br>1. ರಾಜ್ಯದ ಶೇ.80 ರಷ್ಟು ಸಣ್ಣ ಪ್ರಮಾಣದ ನೇಕಾರರಿಗೆ ಅನುಕೂಲವಾಗುವುದರಿಂದ "10 ಹೆಚ್.ಪಿ ವರೆಗೆ ವಿದ್ಯುತ್ ಸಂಪರ್ಕ ಹೊಂದಿರುವ / ಪಡೆದ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ Energy Charges + Fixed Charges(FC) + Fuel adjustment charges(FAC) + Tax ಸೇರಿದಂತೆ ಸಂಪೂರ್ಣ ಬಿಲ್ ಮೊತ್ತವನ್ನು ಸರ್ಕಾರದಿಂದ ಭರಿಸುವುದು ಹಾಗೂ "ಶೂನ್ಯ ಬಿಲ್" ನೀಡತಕ್ಕದ್ದು.<br>2. "10.1 ಹೆಚ್.ಪಿ ಯಿಂದ 20 ಹೆಚ್.ಪಿ ವರೆಗೆ ವಿದ್ಯುತ್ ಸಂಪರ್ಕ ಹೊಂದಿರುವ / ಪಡೆದ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ |

| | | |
|---|---|---|
| | | ಘಟಕಗಳಿಗೆ ಬಳಸಿದ ಒಟ್ಟು ಯೂನಿಟ್‌ಗಳಿಗೆ ಪ್ರತಿ ಯೂನಿಟ್‌ಗೆ ರೂ.1.25 ರಂತೆ ವಿದ್ಯುತ್ ಶುಲ್ಕವನ್ನು (Energy Charges) ಘಟಕದವರು ಪಾವತಿಸುವುದು. ಬಾಕಿ ಉಳಿಯುವ ವಿದ್ಯುತ್ ಶುಲ್ಕದ ಮೊತ್ತವನ್ನು ಮಾತ್ರ ಸರ್ಕಾರದ ಬೊಕ್ಕಸದಿಂದ ಭರಿಸುವುದು. ಉಳಿದಂತೆ, ನಿಗದಿತ ಶುಲ್ಕ (Fixed Charges), ಇಂಧನ ಹೊಂದಾಣಿಕಾ ಶುಲ್ಕ (Fuel adjustment charges), ವಿದ್ಯುತ್ ತೆರಿಗೆ (Tax) ಮೊತ್ತಗಳನ್ನು ನೇಕಾರರೇ / ಘಟಕದವರೇ ಭರಿಸತಕ್ಕದ್ದು" ಎಂದು ತಿದ್ದುಪಡಿ ಮಾಡಿ ದಿನಾಂಕ: 25-09-2024 ರಲ್ಲಿ ಆದೇಶ ಹೊರಡಿಸಲಾಗಿರುತ್ತದೆ.<br>ನಿವೇಶನ ರಹಿತ ನೇಕಾರರಿಗೆ ನಿವೇಶನ ನೀಡುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |
| ಇ) | ರಾಜ್ಯದ ನೇಕಾರರಿಗೆ ಕಚ್ಚಾ ವಸ್ತುಗಳನ್ನು ಸರ್ಕಾರದಿಂದಲೇ ಪೂರೈಸಲು ಹಾಗೂ ನೇಕಾರರಿಂದ ನೇರವಾಗಿ ಯುನಿಫಾರಂ ಸೇರಿದಂತೆ ಇತರೆ ವಸ್ತುಗಳನ್ನು ಖರೀದಿ ಮಾಡುವ ಬಗ್ಗೆ ಸರ್ಕಾರದ ನಿಲುವೇನು; (ಮಾಹಿತಿ ನೀಡುವುದು) | ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಡಿ 3657 ನೇಕಾರರು ನೋಂದಾಯಿತರಾಗಿದ್ದು, ನೋಂದಾಯಿತ ಕೈಮಗ್ಗ ನೇಕಾರರಿಗೆ ಕಚ್ಚಾ ವಸ್ತುಗಳನ್ನು ಪೂರೈಸುವ ಹಾಗೂ ನೇಕಾರರು ಉತ್ಪಾದಿಸಿದ ಸಮವಸ್ತ್ರ ಬಟ್ಟೆಯನ್ನು ಸಂಗ್ರಹಣೆ ಮಾಡುವ ಜವಾಬ್ದಾರಿಯನ್ನು ನಿಗಮವೇ ನಿರ್ವಹಿಸುತ್ತಿದೆ. ನಿಗಮದಲ್ಲಿ ಉತ್ಪಾದನೆಯಾಗುವ ಶೇ.90 ರಷ್ಟು ಬಟ್ಟೆಯನ್ನು ವಿದ್ಯಾವಿಕಾಸ ಯೋಜನೆಯಡಿಯಲ್ಲಿ ಶಿಕ್ಷಣ ಇಲಾಖೆಗೆ ಪೂರೈಸಲಾಗುತ್ತಿದೆ ಮತ್ತು ನೇಕಾರರು ಉತ್ಪಾದಿಸಿದ ಬೆಡ್‌ಶಿಟ್, ಟವೆಲ್ಸ್, ನ್ಯಾಪ್‌ಕಿನ್ಸ್, ಕಾಟನ್‌ಲುಂಗಿಗಳು, ರೇಷ್ಮೆ ಸಾಂಪ್ರದಾಯಿಕ ಸೀರೆಗಳು, ರೇಷ್ಮೆ ಸಾದಾ ಬಟ್ಟೆ ಇತ್ಯಾದಿ ವಸ್ತ್ರಗಳನ್ನು ನೇಕಾರರಿಂದ ಸಂಗ್ರಹಿಸಿ ನಿಗಮದ ಪ್ರಿಯದರ್ಶಿನಿ ಮಾರಾಟ ಮಳಿಗೆಗಳ ಮುಖಾಂತರ ಮಾರಾಟ ಮಾಡುವ ಮೂಲಕ ಮಾರುಕಟ್ಟೆ ಜವಾಬ್ದಾರಿಯನ್ನು ಕೂಡಾ ನಿಗಮವೇ ವಹಿಸಿಕೊಂಡಿರುತ್ತದೆ. 2023-24ನೇ ಸಾಲಿನಲ್ಲಿ 12.27 ಕೋಟಿ ಮೌಲ್ಯದ 3.25 ಲಕ್ಷ ಕೆ.ಜಿ ಕಚ್ಚಾ ಮಾಲನ್ನು ನೇಕಾರರಿಗೆ ಪೂರೈಸಿದ್ದು, 25.19ಲಕ್ಷ ಮೀ. ಬಟ್ಟೆಯನ್ನು ಉತ್ಪಾದಿಸಲಾಗಿರುತ್ತದೆ. |
| ಈ) | ನೇಕಾರರ ರಾಷ್ಟ್ರೀಕೃತ ಬ್ಯಾಂಕ್ ಹಾಗೂ ಸಹಕಾರ ಸಂಘ-ಸಂಸ್ಥೆಗಳಲ್ಲಿ ತೆಗೆದುಕೊಂಡಿರುವ ಸಾಲವನ್ನು ಮನ್ನಾ ಮಾಡುವ ಬಗ್ಗೆ ಸರ್ಕಾರದ ನಿಲುವೇನು; (ವಿವರ ನೀಡುವುದು) | ನೇಕಾರರು ರಾಷ್ಟ್ರೀಕೃತ ಬ್ಯಾಂಕ್ ಹಾಗೂ ಸಹಕಾರ ಸಂಘ- ಸಂಸ್ಥೆಗಳಲ್ಲಿ ತೆಗೆದುಕೊಂಡಿರುವ ಸಾಲವನ್ನು ರಾಜ್ಯ ಸರ್ಕಾರ ಸಾಲಮನ್ನಾ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |
| ಉ) | ನೇಕಾರರ ಕುಟುಂಬದ ಮಕ್ಕಳು ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರವು ಉಚಿತ ಉನ್ನತ ಶಿಕ್ಷಣ ನೀಡುವ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಇಡಿ 102 ಯುಎನ್‌ಇ 2009, ಬೆಂಗಳೂರು, ದಿನಾಂಕ: 04-06-2009 ರನ್ವಯ ರಾಜ್ಯದ ಎಲ್ಲಾ ಸರ್ಕಾರಿ ಕಾಲೇಜುಗಳಲ್ಲಿ ಬಿಎ, ಬಿಎಸ್ಸಿ, ಬಿಬಿಎ, ಬಿಸಿಎ ಮುಂತಾದ ಕೋರ್ಸ್‌ಗಳಿಗೆ ಎಲ್ಲಾ ಅರ್ಹ ವಿದ್ಯಾರ್ಥಿಗಳಿಗೆ ಪ್ರವೇಶಾತಿಯನ್ನು ನೀಡಲು ಅವಕಾಶವಿರುತ್ತದೆ. ಆದ್ದರಿಂದ ಪ್ರವೇಶಾತಿ ಕೋರಿ, ಅರ್ಜಿ ಸಲ್ಲಿಸುವ ಎಲ್ಲಾ ಅರ್ಹ ವಿದ್ಯಾರ್ಥಿಗಳಿಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರವೇಶಾತಿ ನೀಡಲಾಗುತ್ತಿದೆ. ಹೀಗಾಗಿ, ನೇಕಾರರ ಕುಟುಂಬದ ಮಕ್ಕಳಿಗೆ ಪ್ರತ್ಯೇಕವಾಗಿ ಮೀಸಲಾತಿ ಪ್ರಶ್ನೆಯೇ ಉದ್ಭವಿಸುವುದಿಲ್ಲ. |

...3

| | | |
|---|---|---|
| ಊ) | ನೇಕಾರರ ಮಕ್ಕಳಿಗೆ ಹಿಂದುಳಿದ ವರ್ಗಗಳ ವಸತಿ ಶಾಲೆಗಳಲ್ಲಿ ಪ್ರತ್ಯೇಕ ಮೀಸಲಾತಿ ವ್ಯವಸ್ಥೆ ಇದೆಯೇ; ಇಲ್ಲದಿದ್ದಲ್ಲಿ ಯಾವ ಕಾಲಮಿತಿಯೊಳಗೆ ಪ್ರತ್ಯೇಕ ಮೀಸಲಾತಿ ವ್ಯವಸ್ಥೆ ಕಲ್ಪಿಸಲಾಗುವುದು? (ಸಂಪೂಣ ಮಾಹಿತಿ ನೀಡುವುದು) | ಕ್ರೈಸ್ ವ್ಯಾಪ್ತಿಯಲ್ಲಿ ಪ್ರಸ್ತುತ 174 ಹಿಂದುಳಿದ ವರ್ಗಗಳ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಈ ವಸತಿ ಶಾಲೆಗಳಲ್ಲಿ ಪ್ರವರ್ಗವಾರು ಮೀಸಲಾತಿ ಕೆಳಕಂಡಂತಿದೆ.<br><br>ಹಿಂದುಳಿದ ವರ್ಗಗಳ ವಸತಿ ಶಾಲೆಗಳಲ್ಲಿ ಲಭ್ಯವಿರುವ ಪ್ರವರ್ಗವಾರು ಮೀಸಲಾತಿ ವಿವರ |

| ವಸತಿ ಶಾಲೆವರ್ಗ | ವಸತಿ ಶಾಲೆಗಳ ಸಂಖ್ಯೆ | ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು | ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು | ಹಿಂದುಳಿದ ವರ್ಗದ ವಿದ್ಯಾರ್ಥಿಗಳು | ಸಾಮಾನ್ಯ ವರ್ಗದ ವಿದ್ಯಾರ್ಥಿಗಳು |
|---|---|---|---|---|---|
| ಹಿಂದುಳಿದ ವರ್ಗದ ಶಾಲೆಗಳು | 174 | 15% | 10% | 75% | 0 |

ನೇಕಾರರು ಹಿಂದುಳಿದ ವರ್ಗ 2A Category ಯಲ್ಲಿ ಬರುವುದರಿಂದ 2A Category ಯಲ್ಲಿ ಲಭ್ಯವಿರುವ ಸ್ಥಾನಗಳಿಗೆ ನಿಯಮಾನುಸಾರ ಪ್ರವೇಶ ಪಡೆಯಲು ಅವಕಾಶವಿರುತ್ತದೆ.

ಪ್ರಸ್ತುತ ನೇಕಾರರ ಮಕ್ಕಳಿಗೆ ಪ್ರತ್ಯೇಕ ಮೀಸಲಾತಿ ಇರುವುದಿಲ್ಲ.

ಸಂಖ್ಯೆ: **CI 58 JAKE 2025**

(ಶಿವಾನಂದ ಎಸ್. ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

## ಅನುಬಂಧ

| **2024-25 ನೇ ಸಾಲಿನ ನೇಕಾರರ ಸಮ್ಮಾನ್ ಯೋಜನೆಯಡಿ ರಾಜ್ಯದಲ್ಲಿ ನೋಂದಾಯಿಸಿದ ನೇಕಾರರ ಸಂಖ್ಯೆ** | | | |
|---|---|---|---|
| **ಕ್ರ. ಸಂ** | **ಜಿಲ್ಲೆ** | **ಕೈಮಗ್ಗ ನೇಕಾರರ ಸಂಖ್ಯೆ** | **ವಿದ್ಯುತ್ ಮಗ್ಗ ನೇಕಾರರ ಸಂಖ್ಯೆ** |
| **I** | **ಬೆಂಗಳೂರು ವಿಭಾಗ** | | |
| 1 | ಬೆಂಗಳೂರು ನಗರ | 642 | 12390 |
| 2 | ಬೆಂಗಳೂರು (ಗ್ರಾ) | 71 | 17402 |
| 3 | ಚಾಮರಾಜನಗರ | 1071 | 538 |
| 4 | ಚಿಕ್ಕಬಳ್ಳಾಪುರ | 910 | 2918 |
| 5 | ಕೊಡಗು | 69 | 0 |
| 6 | ಕೋಲಾರ | 296 | 591 |
| 7 | ಮಂಡ್ಯ | 54 | 251 |
| 8 | ಮೈಸೂರು | 236 | 105 |
| 9 | ರಾಮನಗರ | 91 | 5573 |
| | **ಒಟ್ಟು** | **3440** | **39768** |
| **II** | **ತುಮಕೂರು ವಿಭಾಗ** | | |
| 1 | ತುಮಕೂರು | 3950 | 5689 |
| 2 | ಚಿತ್ರದುರ್ಗ | 4976 | 56 |
| 3 | ದಾವಣಗೆರೆ | 380 | 34 |
| 4 | ಶಿವಮೊಗ್ಗ | 126 | 34 |
| 5 | ಉಡುಪಿ | 89 | 0 |
| 6 | ದಕ್ಷಿಣ ಕನ್ನಡ | 65 | 0 |
| 7 | ಚಿಕ್ಕಮಗಳೂರು | 61 | 0 |
| 8 | ಹಾಸನ | 125 | 426 |
| | **ಒಟ್ಟು** | **9772** | **6239** |
| **III** | **ಬೆಳಗಾವಿ ವಿಭಾಗ** | | |
| 1 | ಬಾಗಲಕೋಟೆ | 7582 | 17470 |
| 2 | ಬೆಳಗಾವಿ | 3652 | 20474 |
| 3 | ಧಾರವಾಡ | 384 | 300 |
| 4 | ಗದಗ | 1469 | 3251 |
| 5 | ಹಾವೇರಿ | 1590 | 634 |
| 6 | ಉತ್ತರ ಕನ್ನಡ | 65 | 24 |
| 7 | ವಿಜಯಪುರ | 464 | 34 |
| | **ಒಟ್ಟು** | **15206** | **42187** |
| **IV** | **ಬಳ್ಳಾರಿ ವಿಭಾಗ** | | |
| 1 | ಬಳ್ಳಾರಿ | 765 | 0 |
| 2 | ಬೀದರ್ | 578 | 0 |
| 3 | ಕಲಬುರಗಿ | 654 | 2 |
| 4 | ಕೊಪ್ಪಳ | 353 | 1299 |
| 5 | ರಾಯಚೂರು | 32 | 0 |
| 6 | ಯಾದಗಿರಿ | 302 | 0 |
| | **ಒಟ್ಟು** | **2684** | **1301** |
| | **ಒಟ್ಟು** | **31102** | **89495** |

K. Jyothi 17/3/2025

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ
ನಿರ್ದೇಶಕರು ಕೈಮಗ್ಗ ಮತ್ತು ಜವಳಿ